# ಪ್ರತಿಭೆಗಳ ಹುಡುಕಾಟಕ್ಕೆ ಮಹಾನಟಿ



**ಭಾಸ್ಕರ್ ಕೆ.ಎಂ.**
**ಝೀ ಕನ್ನಡ 'ಮಹಾನಟಿ' ಕಾರ್ಯಕ್ರಮ ಮುಖ್ಯಸ್ಥ**

◆ **'ಮಹಾನಟಿ' ರಿಯಾಲಿಟಿ ಶೋ ಹುಟ್ಟಿದ್ದು ಹೇಗೆ? ಅದರ ಉದ್ದೇಶ ಏನು?**

ಝೀ ತಂಡದಲ್ಲಿ ಚರ್ಚಿಸಿ ಮಹಾನಟಿಗೆ ಒಂದು ಸ್ಪಷ್ಟ ರೂಪ ಕೊಟ್ಟಿದ್ದೇವೆ. ಇದಕ್ಕೆ ಅನೇಕರ ಕ್ರಿಯಾಶೀಲ ಕೊಡುಗೆ ಇದೆ. ಪ್ರತಿಭೆಗಳನ್ನು ಆವಿಷ್ಕರಿಸುವ ಕಾರ್ಯಕ್ರಮಗಳಿಂದ ಜನಮೆಚ್ಚುಗೆಯನ್ನು ನಾವು ಗಳಿಸಿದ್ದೇವೆ. ಉದಾಹರಣೆಗೆ 'ಕಾಮಿಡಿ ಕಿಲಾಡಿ', 'ಸರಿಗಮಪ', 'ಡ್ರಾಮಾ ಜೂನಿಯರ್ಸ್' 'ಡಿಕೆಡಿ' ಇರಬಹುದು. ಈ ಎಲ್ಲ ಕಾರ್ಯಕ್ರಮಗಳೂ ಅದರದ್ದೇ ಆದ ಹೆಸರನ್ನು ಪಡೆದಿವೆ. ಎಲ್ಲೋ ಇರುವ ಪ್ರತಿಭೆಯನ್ನು ಹುಡುಕಿ ತಂದು ಸ್ಟಾರ್ ಮಾಡುವುದು ನಮ್ಮ ಉದ್ದೇಶ. ಇದನ್ನು ಸತತವಾಗಿ ಮಾಡುತ್ತಲೇ ಬಂದಿದ್ದೇವೆ. ಇಂತಹ ಹೊಸ ಕಾರ್ಯಕ್ರಮ ಮಾಡುವ ಬಗ್ಗೆ ಯೋಚಿಸಿದಾಗ 'ಮಹಾನಟಿ' ಹೊಳೆಯಿತು. ನಟನೆ ಅನ್ನುವುದು ಹಲವು ಆಯಾಮಗಳಿಂದ ಕೂಡಿರುವ ಕಲೆ. ಕಾಮಿಡಿ, ಡ್ರಾಮಾ ನೋಡಿದ್ದೇವೆ. ಸಿನಿಮಾ ಆಧಾರಿತ ಅಭಿನಯಕ್ಕೂ ಅವಕಾಶ ಇದೆ ಎನ್ನುವ ಯೋಚನೆ ಬಂತು. ಅದನ್ನು ಚರ್ಚಿಸಿ ಈ ಪರಿಕಲ್ಪನೆಯನ್ನು ರೂಪಿಸಿದ್ದೇವೆ. ಮಹಿಳಾ ಕೇಂದ್ರಿತ ಕಾರ್ಯಕ್ರಮ ಆದರೆ ಇನ್ನೂ ಚೆನ್ನಾಗಿರುತ್ತದೆ ಎನ್ನುವ ದೃಷ್ಟಿಯಲ್ಲಿ ಇದನ್ನು ಮಾಡಿದೆವು. ನಾಯಕ ಆಧಾರದ ಮೇಲೂ ಶೋ ಮಾಡಬಹುದಿತ್ತು. ಪುರುಷರಿಗಿಂತ ಮಹಿಳೆಗೆ ಅವಕಾಶ ಕಡಿಮೆ ಅನ್ನುವ ಕಾರಣಕ್ಕೆ ಮಹಿಳಾ ಕೇಂದ್ರಿತವಾಗಿ ಈ ಕಾರ್ಯಕ್ರಮ ಮಾಡಿದ್ದೇವೆ.

◆ **ಸ್ಪರ್ಧಿಗಳ ಆಯ್ಕೆ ಪ್ರಕ್ರಿಯೆ ಹೇಗಿತ್ತು?**

ಆಡಿಷನ್ ಮೂಲಕವೇ ಆಯ್ಕೆ ಮಾಡಿಕೊಂಡಿದ್ದೇವೆ. ರಾಜ್ಯದ 16 ಜಿಲ್ಲೆಯಲ್ಲಿ ಆಡಿಷನ್ ನಡೆಸಿದ್ದೇವೆ. ಸಾಕಷ್ಟು ಸ್ಪರ್ಧಿಗಳು ಹಾಜರಾಗಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ಅವೆಲ್ಲವನ್ನೂ ಒಟ್ಟುಗೂಡಿಸಿ ಅವರ ನಟನೆಯ ಆಧಾರದ ಮೇಲೆ ಆಯ್ಕೆ ಮಾಡಿದ್ದೇವೆ. ನಮ್ಮ ಮೊದಲ ಕಾರ್ಯಕ್ರಮವನ್ನು ಆಡಿಟೋರಿಯಂನಲ್ಲೇ ಮಾಡಿದೆವು. ಬೇರೆ ಕಾರ್ಯಕ್ರಮಗಳಂತೆ ಸ್ಟುಡಿಯೊದಲ್ಲಿ ಮಾಡಲಿಲ್ಲ. ಕಾರಣ ಅದು ಸಿನಿಮಾ ಲುಕ್ ಕೊಡಲಿ ಎನ್ನುವ ಯೋಚನೆ ಇದರ ಹಿಂದೆ ಇತ್ತು. ಸಿನಿಮಾ ಥಿಯೇಟರ್‌ನಲ್ಲೂ ಮಾಡುವ ಯೋಚನೆ ಬಂದಿತ್ತು. ಆದರೆ, ಬೆಳಕು ಮತ್ತು ಧ್ವನಿ ವಿನ್ಯಾಸಕ್ಕೆ ಅದು ಅಷ್ಟು ಸೂಕ್ತ ಆಗುವುದಿಲ್ಲ ಎಂದು ಆಡಿಟೋರಿಯಂ ಆಯ್ಕೆ ಮಾಡಿಕೊಂಡೆವು. ನಮ್ಮ ಕಾರ್ಯಕ್ರಮ ಸಿನಿಮಾ ಫೀಲ್ ಕೊಡಬೇಕು. ಸಿನಿಮಾ ನಟನೆ ಅಂದರೆ ಏನು? ಅದನ್ನು ಹೇಗೆ ಮಾಡಬೇಕು ಎನ್ನುವುದನ್ನು ಹೇಳುವ ಪ್ರಯತ್ನ ನಮ್ಮದು. ಅನೇಕರಿಗೆ 'ಇದಾ, ಇದನ್ನು ನಾನೂ ಮಾಡ್ತೀನಿ' ಎಂದು ಅನ್ನಿಸಬಹುದು. ಕ್ಯಾಮೆರಾ ಎದುರು ನಟಿಸಿದಾಗಲೇ ಅದರ ಕಷ್ಟ ಏನು ಎಂದು ಅವರಿಗೂ ಗೊತ್ತಾಗುತ್ತದೆ. ಎಷ್ಟೋ ಜನರಿಗೆ ಆ ಬೆಳಕು ಮತ್ತು ಕ್ಯಾಮೆರಾ ಎದುರು ಏನು ಹೇಳಬೇಕು ಎನ್ನುವುದೇ ಗೊತ್ತಾಗುವುದಿಲ್ಲ. ಗೊತ್ತಿದ್ದಿದ್ದೂ ಮರೆತು ಹೋಗುತ್ತದೆ.

◆ **ಮಹಾನಟಿಯನ್ನು ಯಾವ ಮಾನದಂಡದಲ್ಲಿ ಆಯ್ಕೆ ಮಾಡುತ್ತೀರಿ?**

ನಾವು ಆಡಿಷನ್ನಿನಲ್ಲಿ ಮಹಾನಟಿಯನ್ನು ಹುಡುಕಿಲ್ಲ. ನಟಿಯರನ್ನು ಮಾತ್ರ ಹುಡುಕಿದ್ದೇವೆ. ಬಂದಿರುವವರು ತಮಗೆ ಗೊತ್ತಿರುವ ಸಂಗತಿಯನ್ನು ಪ್ರಸ್ತುತಪಡಿಸಿದ್ದಾರೆ. ಅದರಲ್ಲಿ ಕೆಲವರು ರಂಗಭೂಮಿ ಹಿನ್ನೆಲೆಯಿಂದ ಬಂದಿದ್ದಾರೆ. ಇನ್ನೂ ಕೆಲವರು ನಟನೆಯ ಅನುಭವ ಇಲ್ಲದೆಯೂ ಬಂದಿದ್ದಾರೆ. ಎಲ್ಲರೂ ತಮಗೆ ಗೊತ್ತಿರುವುದನ್ನು ಹೇಳಿದ್ದಾರೆ. ನೃತ್ಯ ಮತ್ತು ಗಾಯನಕ್ಕೆ ಇರುವಂತೆ ನಟನೆಗೆ ನಿರ್ದಿಷ್ಟ ಮಾನದಂಡವನ್ನು ಅನ್ವಯಿಸಲು ಆಗುವುದಿಲ್ಲ. ಇದೇ ತೀರ್ಪು ಎಂದು ಹೇಳಲೂ ಬರುವುದಿಲ್ಲ. ಸಂಗೀತ ಕಾರ್ಯಕ್ರಮದಲ್ಲಿಯೂ ತಾಳ–ಶ್ರುತಿಯನ್ನು ಶಾಸ್ತ್ರೀಯವಾಗಿ ಕಲಿಯದಿದ್ದರೂ ಯಶಸ್ವಿಯಾಗಿರುವುದಕ್ಕೆ ನಮ್ಮ ಕಾರ್ಯಕ್ರಮವೇ ಸಾಕ್ಷಿಯಾಗಿವೆ. ಈ ಕಾರ್ಯಕ್ರಮ ಕೂಡ ಹಾಗೆಯೇ ಆಗಬಹುದು. ಕೆಲ ಸ್ಪರ್ಧಿಗಳು ಕಲಿತು ಬಂದಿರಬಹುದು, ಇನ್ನೂ ಕೆಲವರು ಇಲ್ಲಿ ಬಂದು ಕಲಿಯುತ್ತಿದ್ದಾರೆ. ಒಟ್ಟಾರೆ ಕಲಿಯುವ ಪ್ರಯತ್ನವೇ ಈ ಕಾರ್ಯಕ್ರಮ. ಕೆಲವರಿಗೆ ನಟನೆಯ ಪರಿಚಯ ಇದ್ದರೂ ನಾವು ಇಲ್ಲಿ ಮಾಡುವ ರೀತಿ ಬೇರೆ. ಒಟ್ಟಾರೆ ಪ್ರತಿಭೆಯನ್ನು ಹುಡುಕುವ ಕ್ರಿಯೆ ಇದು.

◆ **ಎಡಿಟ್ ಮಾಡುವ ಅವಕಾಶ ಇದ್ದರೂ 'ಮೆಕಾನಿಕ್' ವಿವಾದ ಸೃಷ್ಟಿಸಿದ್ದೀರಿ ಎಂದು ಅನ್ನಿಸುವುದಿಲ್ಲವೇ?**

ಉದ್ದೇಶಪೂರ್ವಕವಾಗಿ ಮಾಡಿದ ಕೆಲಸ ಅದಲ್ಲ. ಯಾವುದೇ ವೃತ್ತಿಗೆ ಅವಮಾನ ಮಾಡುವುದು ತಪ್ಪು. ನಾವು ಕೂಡ ಜನರ ನಂಬಿಕೆ ಮತ್ತು ಭಾವನೆಗಳ ಜೊತೆ ಆಟ ಆಡುವುದಿಲ್ಲ. ಆ ಉದ್ದೇಶವಂತೂ ಇಲ್ಲವೇ ಇಲ್ಲ. ಎದ್ದಿರುವ ವಿವಾದ ಅಂಶ ಪೂರ್ವನಿರ್ಧರಿತ ಅಲ್ಲ. 'ಆನ್ ದ ಸ್ಪಾಟ್' ಆ ಸನ್ನಿವೇಶದಲ್ಲಿ ಅವರಿಗೆ ತಿಳಿದದ್ದನ್ನು ಸ್ಪರ್ಧಿ ಹೇಳಿದ್ದಾರೆ. ಅದಕ್ಕೆ ಅವರು ತಯಾರಿಯನ್ನು ಮಾಡಿಕೊಂಡಿರಲಿಲ್ಲ. ವಿಷಯ ಏನೇ ಇದ್ದರೂ ಒಂದು ಸಮುದಾಯಕ್ಕೆ ನೋವಾಗಿದ್ದರೆ ಅದಕ್ಕೆ ನಾವು ಕ್ಷಮೆ ಕೇಳಲು ಸಿದ್ಧರಿದ್ದೇವೆ. ನಮ್ಮ ಉದ್ದೇಶ ಯಾರಿಗೂ ನೋವು ಕೊಡುವುದಲ್ಲ. ಯಾರಿಗೋ ನೋವು ಉಂಟುಮಾಡಿ ನಾವು ಪಡೆಯುವುದು ಏನೂ ಇಲ್ಲ. ಈ ಕಾರ್ಯಕ್ರಮ ಅಂತಹ ಕೆಲಸಗಳಿಗೆ ಅಲ್ಲ. ಇದರ ಮೂಲ ಆಶಯ ಪ್ರತಿಭೆಗೆ ವೇದಿಕೆಯನ್ನು ಕಲ್ಪಿಸುವುದು. ವಿವಾದ ಆಗಿರುವ ಕಾರ್ಯಕ್ರಮದ ನಂತರ ನಾಲ್ಕು ಶೋಗಳು ಪ್ರಸಾರ ಆಗಿವೆ. ಬೇರೆ ಬೇರೆ ವೃತ್ತಿಯ ವಿಷಯಗಳೂ ಬಂದಿವೆ. ಯಾವುದೂ ಪೂರ್ವನಿರ್ಧಾರ ಮಾಡಿಲ್ಲ ಎನ್ನುವುದು ಸ್ಪಷ್ಟ. ಏನೇ ಆಗಲಿ ಕ್ಷಮೆ ಕೋರುತ್ತೇನೆ.

■ **ರಾಘವೇಂದ್ರ ಕೆ.**